# ಸ್ವಾಮಿ ಸಿದ್ಧೇಶ್ವರಾನಂದರು

ಸ್ವಾಮಿ ರಾಘವೇಶಾನಂದ

### ಭಾಗ ೨

೧೯೩೯ನೇ ವರ್ಷದಲ್ಲಿ ಫ್ರಾನ್ಸ್ ಹಾಗೂ ಜರ್ಮನಿ ಮಧ್ಯೆ ಯುದ್ಧ ಪ್ರಾರಂಭವಾಯಿತು. ಸ್ವಾಮಿ ಸಿದ್ಧೇಶ್ವರಾನಂದರು ಬ್ರಿಟಿಷ್ ಪಾಸ್‌ಪೋರ್ಟ್ ಹೊಂದಿದ್ದರಿಂದ ಅವರು ಬಂಧನಕ್ಕೊಳಗಾಗುವ ಸಾಧ್ಯತೆಗಳಿದ್ದವು. ಅಮೆರಿಕಾದಲ್ಲಿರುವ ರಾಮಕೃಷ್ಣ ಸಂಘದ ಸಾಧುಗಳು ಸಿದ್ಧೇಶ್ವರಾನಂದರಿಗೆ ಅಮೆರಿಕಾಗೆ ಬರಲು ಸೂಚಿಸಿದರು. ಇದಲ್ಲದೆ ಕೆಲವು ಭಕ್ತರು ಅವರಿಗೆ ಸ್ವಿಜರ್‌ಲ್ಯಾಂಡಿಗೆ ಹೋಗಲು ಕೇಳಿಕೊಂಡರು. ಆದರೆ ಸಿದ್ಧೇಶ್ವರಾನಂದರು ಕಷ್ಟದ ಸಮಯದಲ್ಲಿ ತಮ್ಮ ಶಿಷ್ಯಂದಿರನ್ನು ಬಿಟ್ಟು ಹೋಗಲು ನಿರಾಕರಿಸಿದರು. ಯುದ್ಧಕಾಲದಲ್ಲಿ ಸ್ವಾಮಿಗಳು ಫ್ರಾನ್ಸಿನ ಬೇರೆ ಬೇರೆ ಜಾಗಗಳಲ್ಲಿ ವಾಸಮಾಡಿದರು. ೧೯೪೦-೪೧ರಲ್ಲಿ ಸ್ವಾಮೀಜಿ ಫ್ರಾನ್ಸಿನ ದಕ್ಷಿಣ ಕರಾವಳಿಯಲ್ಲಿರುವ ಮೌಂಟ್ ಪೀಲಿಯರ್ ಎಂಬ ಪಟ್ಟಣದಲ್ಲಿ ವಾಸಮಾಡಿದರು. ಇಲ್ಲಿ ಅವರು ಅಪೆಂಡಿಕ್ಸಿನ ಶಸ್ತ್ರೋಪಚಾರಕ್ಕೆ ಒಳಗಾದರು. ಅವರಿಗೆ ವೈದ್ಯರು ಹೆಚ್ಚು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರು. ಅವರ ಆರೋಗ್ಯ ಸುಧಾರಿಸಿದಾಗ ಅವರು ಸಮಯ ನಷ್ಟ ಮಾಡದೆ ಸ್ಥಳೀಯ ವಿಶ್ವವಿದ್ಯಾಲಯವೊಂದರಲ್ಲಿ ತತ್ತ್ವಶಾಸ್ತ್ರ, ಮನೋವಿಜ್ಞಾನ ಮತ್ತು ಫ್ರೆಂಚ್ ಸಾಹಿತ್ಯವನ್ನು ಅಧ್ಯಯನ ಮಾಡಲಾರಂಭಿಸಿದರು. ಅಲ್ಲಿ ಇದ್ದಾಗಲೇ ಸ್ವಾಮಿಗಳು ತಮ್ಮ 'Meditation According to the Yoga Vedanta' ಎಂಬ ಗ್ರಂಥಕ್ಕೆ ಮುನ್ನುಡಿಯನ್ನು ಬರೆದರು. ಇದಲ್ಲದೆ ಆಳವಾಗಿ ಕ್ರಿಶ್ಚಿಯನ್ ಶಾಸ್ತ್ರ ಗ್ರಂಥಗಳನ್ನು ಕೂಡ ಇವರು ಅಧ್ಯಯನ ಮಾಡಿದರು. ಸ್ವಾಮೀಜಿಯವರು ಜನಸಾಮಾನ್ಯರಿಗೆ ವಿಶ್ವವಿದ್ಯಾಲಯದಲ್ಲಿ ಮಾಡಿದ ಪ್ರವಚನಗಳನ್ನು ಆ ವಿಶ್ವವಿದ್ಯಾಲಯದವರು ಒಂದು ಗ್ರಂಥದ ರೂಪದಲ್ಲಿ ಸಂಗ್ರಹ ಮಾಡಿ ಪ್ರಕಟಿಸಿದರು. ೧೯೪೧-೧೯೪೩ರ ಮಧ್ಯೆ ಸಿದ್ಧೇಶ್ವರಾನಂದರು ಟುಲೂಸ್ ವಿಶ್ವವಿದ್ಯಾನಿಲಯ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದರು.

'Faculty of Letters' ಎಂಬ ವಿಭಾಗದ ಮುಖ್ಯಸ್ಥರು ಸ್ವಾಮಿಗಳಿಗೆ ಪ್ರತಿ ವಾರ ವಿಶ್ವವಿದ್ಯಾಲಯದಲ್ಲಿ ಪ್ರವಚನ ಮಾಡಲು ಅವಕಾಶ ಮಾಡಿಕೊಟ್ಟರು. ಸಿದ್ಧೇಶ್ವರಾನಂದರ ಪ್ರವಚನಗಳನ್ನು ಜನ ತುಂಬ ಆಸಕ್ತಿಯಿಂದ ಆಲಿಸುತ್ತಿದ್ದರು. ಮುಂದೆ ಈ ವ್ಯಾಖ್ಯಾನಗಳನ್ನೇ 'Some Aspects of Vedanta Philosophy' ('ವೇದಾಂತ ತತ್ತ್ವದ ಕೆಲವು ದೃಷ್ಟಿಕೋನಗಳು') ಎಂಬ ಪುಸ್ತಕದ ರೂಪದಲ್ಲಿ ಪ್ರಕಟಿಸಲಾಯಿತು. ಸ್ವಾಮಿಗಳು ವೇದಾಂತದ ಅತಿ ಸೂಕ್ಷ್ಮವಾದ ವಿಚಾರಗಳನ್ನು ಟುಲೂಸ್ ನಗರದ ಜನತೆಗೆ ಅತ್ಯಂತ ಸ್ಪಷ್ಟತೆಯಿಂದ ವಿವರಿಸಿದರು. ಯುದ್ಧದ ಕಾರಣದಿಂದ ಹಾಗೂ



ತಾವು ಬ್ರಿಟಿಷ್ ಪಾಸ್‌ಪೋರ್ಟ್ ಹೊಂದಿದ್ದ ಕಾರಣ ಸ್ವಾಮಿಗಳು ನಿರ್ಬಂಧನೆಗೆ ಒಳಗಾಗುವ ಸಾಧ್ಯತೆ ಇತ್ತು. ಇದನ್ನು ತಪ್ಪಿಸಿಕೊಳ್ಳಲು ಸಿದ್ಧೇಶ್ವರಾನಂದರು ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ತತ್ತ್ವಶಾಸ್ತ್ರ ವಿಷಯದಲ್ಲಿ ಡಾಕ್ಟರೇಟ್ ಪದವಿಗೆ ತಮ್ಮ ಹೆಸರನ್ನು ನೋಂದಾಯಿಸುವ ಬಗ್ಗೆ ವಿಚಾರ ನಡೆಸಿದರು. ಆದರೆ ಆ ವಿಭಾಗದ ಮುಖ್ಯಸ್ಥರ ಷರತ್ತುಬದ್ಧ ಒಪ್ಪಿಗೆ ಆ ಸಮಯದಲ್ಲಿ ಸ್ವಾಮಿಗಳಿಗೆ ಅನುಕೂಲಕರವಾಗಿರಲಿಲ್ಲ. ೧೯೪೨-೪೩ರಲ್ಲಿ ಅವರು ದಕ್ಷಿಣ ಫ್ರಾನ್ಸಿನ ಟಾರ್ನ್ ಜಿಲ್ಲೆಯ ಲೆವೋರ್ ಎಂಬ ಉಪನಗರದಲ್ಲಿ ವಾಸಿಸಿದರು. ಅಲ್ಲಿ ಸ್ವಾಮೀಜಿಗೆ ತುಂಬಾ ಜನ ಭಕ್ತರಾದರು. ಸಿದ್ಧೇಶ್ವರಾನಂದರು ನೀಮಸ್, ಮಾರ್ಸೆಲಿ ಹಾಗೂ ಲಿಯೋನ್ ನಗರಗಳಲ್ಲಿ ಕೂಡ ಉಪನ್ಯಾಸಗಳನ್ನು ಮಾಡಿದರು. ಜನವರಿ ೧೯೪೩ರಲ್ಲಿ ನಡೆದ ಒಂದು ನಾಟಕೀಯ ಘಟನೆ ಸಿದ್ಧೇಶ್ವರಾನಂದರಿಗೆ ಮುಂದೆ ತುಂಬಾ ಸಹಾಯವಾಯಿತು.

ಪ್ಯಾರಿಸ್ ನಗರದಲ್ಲಿ ತನ್ನ ಮನೆಯನ್ನು ಸಿದ್ಧೇಶ್ವರಾನಂದರ ಉಪಯೋಗಕ್ಕೆ ಕೊಟ್ಟ ಮ್ಯಾಡಮ್ ವೆದ್ಯರ್ನ್, ರೆಡ್‌ಕ್ರಾಸ್ ಸೊಸೈಟಿ ಪರ ಪ್ಯಾರಿಸಿನಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ಒಂದು ರಾತ್ರಿ ಆಕೆಗೆ ಸ್ವಾಮಿ ಸಿದ್ಧೇಶ್ವರಾನಂದರನ್ನು ನೋಡಬೇಕು ಎಂಬ

ಹಂಬಲವಾಯಿತು. ಅವಳು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಇರುವಾಗ ಅವಳ ಬೋಧಕರಾದ ಸ್ವಾಮಿ ಅಶೋಕಾನಂದರು ಆಕೆಗೆ, ತಾನು ಫ್ರಾನ್ಸ್‌ನಲ್ಲಿ ಇದ್ದಾಗ ಸ್ವಾಮಿ ಸಿದ್ಧೇಶ್ವರಾನಂದರನ್ನು ತನ್ನ ಗುರು ಎಂದು ಕಾಣಬೇಕು ಎಂದು ಹೇಳಿದ್ದ ಮಾತು ನೆನಪಾಯಿತು. ಮಾರನೆಯ ದಿನವೇ ಅನಿರೀಕ್ಷಿತವಾಗಿ ಆಕೆಗೆ ರೆಡ್‌ಕ್ರಾಸ್ ಸೈನ್ಯಾಧಿಕಾರಿಗಳಿಂದ ೪ ದಿನಗಳ ರಜೆ ಸಿಕ್ಕಿತು. ಅವಳು ಸ್ವಾಮಿ ಸಿದ್ಧೇಶ್ವರಾನಂದರು ವಾಸಿಸುವ ಹೌಟ್-ಗ್ಯಾರೋನ್ನೇಗೆ ಭೇಟಿಕೊಟ್ಟಳು. ಆಶ್ಚರ್ಯಕರವಾಗಿ ಮ್ಯಾಡಮ್ ವೆರ್ದ್ಯರ್ನ್‌ಗೆ ಅವತ್ತಿನ ಸಂಜೆ ಟೌಲೌಸ್‌ಗೆ ಹೊರಡುವ ಟ್ರೈನ್ ಒಂದರಲ್ಲಿ ಜಾಗ ಸಿಕ್ಕಿತು. ಅಲ್ಲಿ ತಲುಪಿದಾಗ ಅವಳು ಸಿದ್ಧೇಶ್ವರಾನಂದರಿಗೆ ಕರೆ ಮಾಡಿದಳು. ಆಗ ಸ್ವಾಮಿಗಳು, ಬರುವ ದಿನಗಳಲ್ಲಿ ತಾವು ಸ್ಥಳ ಬಂಧನಕ್ಕೊಳಗಾಗುವ ಬಗ್ಗೆ ಆಕೆಗೆ ತಿಳಿಸಿದರು.

ಇದನ್ನು ಕೇಳುತ್ತಲೇ ವೆರ್ದ್ಯರ್ನ್ ಲಾವೌರ್ ಉಪನಗರಿಗೆ ತಕ್ಷಣವೇ ರವಾನೆಯಾದಳು. ಅಲ್ಲಿ ಸಿದ್ಧೇಶ್ವರಾನಂದರನ್ನು ಸ್ಥಳೀಯ ಪೊಲೀಸ್ ಆಯುಕ್ತರಾದ ಕಮಾಂಡೆಂಟ್ ದೆನ್‌ಗ್ಲೈಡ್ ಬಳಿ ಕರೆದುಕೊಂಡು ಹೋಗಿ ಆ ಆಯುಕ್ತರ ಹಿರಿಯ ಅಧಿಕಾರಿಗಳು (ಮ್ಯಾಡಮ್ ವೆರ್ದ್ಯರ್ನ್ ಅವರ ಆಪ್ತ ಸ್ನೇಹಿತ) ಸ್ವಾಮಿಗಳ ಸ್ಥಳ ಬಂಧನದ ಆದೇಶವನ್ನು ರದ್ದು ಮಾಡಿದ್ದಾರೆ ಎಂದು ದೆನ್‌ಗ್ಲೈಡ್ ಬಳಿ ಹೇಳಿದರು. ಈ ವಿಚಾರದ ಸಂಬಂಧವಾಗಿ ಅವಳು ತಾನೇ ಜಾಮೀನುದಾರಳಾಗುವಳು ಎಂದಳು. ಮೇಡಂ ವೆರ್ದ್ಯರ್ನ್‌ರವರ ಈ ಪ್ರಸ್ತಾವನೆ ಆಯುಕ್ತರಿಗೆ ಒಪ್ಪಿಗೆ ಆಯಿತು. ಇದಿಷ್ಟಲ್ಲದೆ ಪೊಲೀಸ್ ಆಯುಕ್ತರೂ ಕೂಡ ಸಿದ್ಧೇಶ್ವರಾನಂದರಿಗೆ, ''ನೀವು ಬ್ರಿಟಿಷ್ ನಾಗರಿಕ ಎಂಬ ಗುರುತಿನ ಬದಲು ಭಾರತೀಯ ನಾಗರಿಕನೆಂಬ ಪತ್ರ ಬೇಕೆ?'' ಎಂದು ಕೇಳಿದರು. ಇದಕ್ಕೆ ಸ್ವಾಮಿ ಸಿದ್ಧೇಶ್ವರಾನಂದರು ಸಂತೋಷದಿಂದ ಒಪ್ಪಿಕೊಂಡರು. ಆಗ ಆಯುಕ್ತರು ಸ್ವಾಮಿಗಳ ಬ್ರಿಟಿಷ್ ಪಾಸ್‌ಪೋರ್ಟನ್ನು ಹರಿದು ಹಾಕಿ ಭಾರತೀಯ ಪಾಸ್‌ಪೋರ್ಟನ್ನು ಅವರಿಗೆ ಕೊಟ್ಟರು. ಸಿದ್ಧೇಶ್ವರಾನಂದರು ಸಂತೋಷದ ಕಣ್ಣೀರು ಹರಿಸುತ್ತ, ಇದನ್ನು ಶ್ರೀರಾಮಕೃಷ್ಣರ ಕೃಪೆ ಎಂದು ಭಾವಿಸಿದರು.

ದ್ವಿತೀಯ ವಿಶ್ವಯುದ್ಧ ಮುಗಿಯುತ್ತಿದಂತೆಯೇ ಸ್ವಾಮಿ ಸಿದ್ಧೇಶ್ವರಾನಂದರು ಪ್ಯಾರಿಸಿಗೆ ಜುಲೈ ೧೯೪೫ರಲ್ಲಿ ಹಿಂತಿರುಗಿದರು. ಪ್ಯಾರಿಸ್ ನಗರಕ್ಕೆ ಬರುವ ದಾರಿಯಲ್ಲಿ ಅವರು ಕೆಲವು ಕಾರ್ಮಲೈಟ್, ಬೆನೆಡಿಕ್ಟಿನ್, ಕರ್ತುಸಿಯನ್ ಹಾಗೂ ಡೊಮಿನಿಕ್ ಸಂಪ್ರದಾಯದ ಕ್ರಿಶ್ಚಿಯನ್ ಚರ್ಚುಗಳಿಗೆ ಭೇಟಿ ನೀಡಿದರು. ಸಿದ್ಧೇಶ್ವರಾನಂದರು ಎರಡು ವಾರಕ್ಕೆ ಒಮ್ಮೆ ಉಪನ್ಯಾಸ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ತರಗತಿಗಳಿಗೆ ೧೦೦ ರಿಂದ ೧೫೦ ಜನ ಬರುತ್ತಿದ್ದರು. ಈ ತರಗತಿಗಳಲ್ಲದೆ ಸಿದ್ಧೇಶ್ವರಾನಂದರು ಪ್ರತಿ ವಾರ ಸೊರ್ಬೋನ್ ವಿಶ್ವವಿದ್ಯಾಲಯದ ತಾತ್ತ್ವಿಕ ಮತ್ತು ಅತೀಂದ್ರಿಯ ಸಂಶೋಧನಾ ಕೇಂದ್ರದಲ್ಲಿ ವ್ಯಾಖ್ಯಾನ ಮಾಡುತ್ತಿದ್ದರು. ಫ್ರಾನ್ಸ್ ದೇಶದಲ್ಲಿ ತಮ್ಮ ೨೦ ವರ್ಷಗಳ ದೀರ್ಘ ವಾಸದಲ್ಲಿ ಅವರು ಭಾರತಕ್ಕೆ ಒಂದೇ ಒಂದು ಸಲ ಭೇಟಿ ನೀಡಿದರು. ಅವರ ತಾಯಿ ಅವರಿಗೆ ತಮ್ಮ ಅನಾರೋಗ್ಯದ ಬಗ್ಗೆ ಪತ್ರದಲ್ಲಿ ತಿಳಿಸಿದಾಗ ಸಿದ್ಧೇಶ್ವರಾನಂದರು ತ್ರಿಚೂರಿನಲ್ಲಿರುವ ತಮ್ಮ ತಾಯಿಯನ್ನು ನೋಡಲು ಭಾರತಕ್ಕೆ ಬಂದರು. ಸ್ವಾಮಿಗಳು ಕೆಲವು ದಿನ ತಮ್ಮ ತಾಯಿಯ ಜೊತೆ ಕಳೆದರು. ಸಿದ್ಧೇಶ್ವರಾನಂದರು ಅಲ್ಲಿಂದ ಹೊರಟ ಎರಡೇ ದಿನಕ್ಕೆ ಅವರ ತಾಯಿ ಮರಣ ಹೊಂದಿದರು.

ಸಿದ್ಧೇಶ್ವರಾನಂದರಿಗೆ ಪ್ಯಾರಿಸ್‌ನಲ್ಲಿ ರಾಮಕೃಷ್ಣ ಸಂಘದ ಕೇಂದ್ರವನ್ನು ಶಾಶ್ವತವಾಗಿ ಸ್ಥಾಪಿಸಬೇಕೆಂಬ ಯೋಚನೆ ಹುಟ್ಟಿತು. ಇದಕ್ಕಾಗಿ ಅವರು ೧೯೪೮ರಲ್ಲಿ ಸೂಕ್ತವಾದ ಒಂದು ಜಾಗವನ್ನು ಹುಡುಕಲಾರಂಭಿಸಿದರು. ಕೊನೆಗೆ ಒಂದು ದೊಡ್ಡ ಮನೆಯುಳ್ಳ ೧೭ ಎಕರೆ ಜಮೀನು ಖರೀದಿಸಿದರು. ಈ ಜಾಗವನ್ನು ಸ್ಥಳೀಯರು ಚಾಟೊ ಬೋಯಿಸ್ ವಿಗ್ನ್‌ಒಲ್ಲೆಸ್ ಎಂದು ಕರೆಯುತ್ತಿದ್ದರು. ಈ ಜಮೀನಿನಲ್ಲಿ ಕೆಲವು ಚಿಕ್ಕ ಮನೆಗಳು ಹಾಗೂ ಕೃಷಿ ಕಾರ್ಯ ಮಾಡಲು ಸ್ವಲ್ಪ ಜಾಗವಿತ್ತು. ಆದರೆ ಆಕಸ್ಮಿಕವಾಗಿ ಸ್ವಾಮಿ ಅಖಿಲಾನಂದರ ಶಿಷ್ಯರಾದ ಓರ್ವ ಶ್ರೀಮಂತ ಮಹಿಳೆಯು ಸಿದ್ಧೇಶ್ವರಾನಂದರ ಬಳಿ ಬಂದು, ತಾನು ಗುಣವಾಗದ ರೋಗದಿಂದ ನರಳಾಡುತ್ತಾ ಇರುವ ಬಗ್ಗೆ ಹೇಳಿದಳು. ಹಾಗೂ ಪ್ಯಾರಿಸ್‌ನಲ್ಲಿ ಇರುವ ತನ್ನ ಮನೆಯನ್ನು ಮಾರಿ ಅದರಿಂದ ಬರುವ ಸಂಪೂರ್ಣ ಹಣವನ್ನು ಪ್ಯಾರಿಸ್ ನಗರದ ಹತ್ತಿರ ಕೇಂದ್ರವೊಂದನ್ನು ಸ್ಥಾಪಿಸಲು ಸ್ವಾಮಿಗಳಿಗೆ ದಾನ ಮಾಡುವುದಾಗಿ ಹೇಳಿದಳು. ಈ ರೀತಿ ಪ್ಯಾರಿಸ್ ನಗರದಿಂದ ೨೦ ಕಿ.ಮೀ. ದೂರ ವಿರುವ ಗ್ರೆಟ್ಜ್ ಆರ್ಮವೀಲ್ಯೆ ಎಂಬ ಹಳ್ಳಿಯ ತುದಿಯಲ್ಲಿ Centre Vedantique Ramakrishna ಸ್ಥಾಪನೆಗೊಂಡಿತು. ಆಮೇಲೆ ಸಿದ್ಧೇಶ್ವರಾನಂದರು ತಮ್ಮ ಯುರೋಪಿಯನ್ ಅಜ್ಜಿ ಎಂದು ಕರೆಯುತ್ತಿದ್ದ ಮ್ಯಾಡಮ್ ಪೈಕ್ಸ್ ಎಂಬ ಭಕ್ತೆಯು, ಆ ಕೇಂದ್ರದ ಬದಿಗಿರುವ ಜಾಗವನ್ನು ಖರೀದಿ ಮಾಡಿ ದಾನ ಮಾಡಿದಳು. ಸ್ವಾಮಿ ಸಿದ್ಧೇಶ್ವರಾನಂದರು ಮ್ಯಾಡಮ್ ಪೈಕ್ಸ್‌ಗೆ 'ಲೀಲಾವತಿ' ಎಂದು ಹೆಸರು ಕೊಟ್ಟಿದ್ದರು.

ಸಿದ್ಧೇಶ್ವರಾನಂದರಿಗೆ ಎರಡು ಯೋಜನೆಗಳನ್ನು ಕೈಗೊಳ್ಳಬೇಕೆಂದು ಆಸೆಯಿತ್ತು, ಅವು ಸಂನ್ಯಾಸಿಯರ ಮಠ ನಿರ್ಮಾಣ ಮತ್ತು ಸಾರ್ವತ್ರಿಕ ಧರ್ಮದ ಶಿಕ್ಷಣ ಕೊಡುವ ಯೂನಿವರ್ಸಿಟಿ ಆಫ್ ಮ್ಯಾನ್ ಎಂಬ ವಿಶ್ವವಿದ್ಯಾಲಯ. ಆದರೆ ಕಾರಣಾಂತರಗಳಿಂದ ಅವರ ಈ ಎರಡೂ ಮಹತ್ವಾಕಾಂಕ್ಷೆಗಳು ಈಡೇರಲಿಲ್ಲ.

ಸ್ವಾಮಿ ಸಿದ್ಧೇಶ್ವರಾನಂದರಿಗೆ ಹಲವಾರು ಪ್ರಸಿದ್ಧ ವಿಜ್ಞಾನಿಗಳು, ಸಾಹಿತಿಗಳು ಒಳ್ಳೆಯ ಮಿತ್ರರಾಗಿದ್ದರು. ಅವರಲ್ಲಿ ಕೆಲವರು: ಪ್ರಖ್ಯಾತ ಮನೋವಿಜ್ಞಾನಿ Dr.Herbert Benoit, ನೊಬೆಲ್ ಪ್ರಶಸ್ತಿ ಪಡೆದ Dr.Albert Schweitzer, ಬೌದ್ಧ ಪಂಡಿತರು ಹಾಗೂ ಲೇಖಕರಾದ Dr.D.T Suzuki, ಹಂಗೆರಿ

ದೇಶದ ವಾಯುಬಲ ವಿಜ್ಞಾನಿ Prof. Theodore Von Karman ಮತ್ತು ಜರ್ಮನಿಯ ಇಂಡೋಲೋಜಿಸ್ಟ್ ಹಾಗೂ ಧಾರ್ಮಿಕ ಪಂಡಿತರಾದ Prof. Helmuth Von Glasenapp.

೧೯೪೮ರಲ್ಲಿ ಗ್ರೆಟ್ಜ್ ವೇದಾಂತ ಕೇಂದ್ರಕ್ಕೆ ಸ್ವಾಮಿ ಯತೀಶ್ವರಾನಂದರು ವಿಶೇಷ ಅತಿಥಿಗಳಾಗಿ ಭೇಟಿ ನೀಡಿದರು. ಸ್ವಾಮಿ ಯತೀಶ್ವರಾನಂದರು ಸಿದ್ಧೇಶ್ವರಾನಂದರ ಸ್ನೇಹಿತರು ಹಾಗೂ ಮಾರ್ಗದರ್ಶಕರಾಗಿದ್ದರು. ಸ್ವಾಮಿ ಯತೀಶ್ವರಾನಂದರು ಅಮೆರಿಕಾದಿಂದ ಭಾರತಕ್ಕೆ ಹಿಂದಿರುಗುತ್ತಾ ಇದ್ದರು, ಆಗ ಅವರು ಪ್ಯಾರಿಸ್‌ಗೆ ದಾರಿಯಲ್ಲಿ ಭೇಟಿ ನೀಡಿದರು. ಗ್ರೆಟ್ಜ್ ಕೇಂದ್ರದ ಸ್ಥಾಪನೆ ಕಂಡು ತುಂಬಾ ಆನಂದಗೊಂಡರು. ಯತೀಶ್ವರಾನಂದರು ಪ್ಯಾರಿಸ್ ನಗರವನ್ನು ಅವರ ಕೇಂದ್ರ ಮಾಡಿಕೊಂಡು ಅವರು ಹಿಂದೆ ಕೆಲಸ ಮಾಡಿದ ಯೂರೋಪಿನ ನಗರಗಳಲ್ಲಿ ಉಪನ್ಯಾಸಗಳನ್ನು ಮಾಡಿ ಹಲವಾರು ಭಕ್ತರನ್ನು ಭೇಟಿಯಾದರು.

೧೯೪೯ರಲ್ಲಿ ಸಿದ್ಧೇಶ್ವರಾನಂದರಿಗೆ ಡಾ. ಸರ್ವೆಪಲ್ಲಿ ರಾಧಾಕೃಷ್ಣರು ಪ್ಯಾರಿಸ್‌ನಲ್ಲಿರುವ ಬಗ್ಗೆ ಮಾಹಿತಿ ತಿಳಿಯಿತು. ಸ್ವಾಮಿಗಳು ತಮ್ಮ ಹಳೆಯ ಮಿತ್ರನನ್ನು ಗ್ರೆಟ್ಜ್ ಕೇಂದ್ರಕ್ಕೆ ಆಹ್ವಾನಿಸಿದರು. ಸಿದ್ಧೇಶ್ವರಾನಂದರು ತಾವು ಬರೆದ Meditation According to the Yoga Vedanta ಗ್ರಂಥಕ್ಕೆ ಮುನ್ನುಡಿ ಬರೆದು ಕೊಡಲು ವಿನಂತಿಸಿದರು. ಇದಕ್ಕೆ ಡಾ.ರಾಧಾಕೃಷ್ಣನ್ ಅವರು ಸಂತೋಷದಿಂದ ಒಪ್ಪಿಕೊಂಡರು.

ಗ್ರೆಟ್ಜ್ ಕೇಂದ್ರಕ್ಕೆ ೧೯೫೪ರಲ್ಲಿ ಇನ್ನೋರ್ವ ಗಣ್ಯರು ಭೇಟಿ ಕೊಟ್ಟರು. ಅವರು ಉತ್ತರ ಕೇರಳದ ಕಾಞಂಗಾಡಿನ ಪ್ರಸಿದ್ಧ ಸಂತರಾದ ಸ್ವಾಮಿ ರಾಮದಾಸರು.

೭ನೇ ಏಪ್ರಿಲ್ ೧೯೫೫ ರಂದು ಸ್ವಾಮಿ ಸಿದ್ಧೇಶ್ವರಾನಂದರಿಗೆ ತೀವ್ರವಾದ ಹೃದಯಾಘಾತವಾಯಿತು. ಆಶ್ರಮದಲ್ಲೇ ಅವರಿಗೆ ಉಪಚಾರ ಮಾಡಲಾಯಿತು. ಆದರೆ ಅವರು ನಿಧಾನಗತಿಯಿಂದ ಚೇತರಿಸಿಕೊಂಡರು. ಆದರೂ ಅವರು ಆಶ್ರಮದ ಬಾಗಿಲುಗಳನ್ನು ಭಕ್ತರಿಗಾಗಿ ಸದಾ ತೆರೆದಿರುತ್ತಿದ್ದರು. ಸಿದ್ಧೇಶ್ವರಾನಂದರು ಸದಾ ಹಸನ್ಮುಖಿಗಳಾಗಿರುತ್ತಿದರು. ಅವರ ತಮ್ಮ ಹಾಸ್ಯ ಪ್ರವೃತ್ತಿಯನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು.

ಸ್ವಾಮಿ ಸಿದ್ಧೇಶ್ವರಾನಂದರು ವಿದೂಷಕ ನಟ ಚಾರ್ಲಿ ಚಾಪ್ಲಿನ್ ಅವರ ಅಭಿಮಾನಿಯಾಗಿದ್ದರು. ಸ್ವಾಮಿಗಳು ಹೇಳುತ್ತಿದ್ದರು, ''ನಾವು (ರಾಮಕೃಷ್ಣ ಸಂಘದ ಸಾಧುಗಳು) ಸಾಂಪ್ರದಾಯಿಕ ಹಿಂದೂ ಮತ್ತು ಬೌದ್ಧ ಸನ್ಯಾಸಿಗಳ ತರಹ ಸದಾ ಗಂಭೀರಾವಸ್ಥೆಯಲ್ಲಿರುವುದಿಲ್ಲ. 'ನನ್ನನ್ನು ಒಬ್ಬ ಶುಷ್ಕ ತಪಸ್ವಿಯನ್ನಾಗಿಸಬೇಡ' ಎಂದು ಜಗನ್ಮಾತೆಯ ಬಳಿ ಪ್ರಾರ್ಥಿಸಿದ ಶ್ರೀರಾಮಕೃಷ್ಣರ ಸಂಪ್ರದಾಯಕ್ಕೆ ಸೇರಿರುವ ಸನ್ಯಾಸಿಗಳು ನಾವು'' ಎಂದು. ಸಿದ್ಧೇಶ್ವರಾನಂದರು ಹವ್ಯಾಸಿ ಓದುಗರಾಗಿದ್ದರು. ಅವರು ವೋಲ್ಟೇರ್, ಅನಾಟೋಲೆ ಫ್ರಾನ್ಸ್, ಚಾರ್ಲ್ಸ್ ಪೆಗುಯಿ ಮತ್ತು ರವೀಂದ್ರನಾಥ್ ಟಾಗೋರ್ ಅವರ ಸಾಹಿತ್ಯವನ್ನು ಅಧ್ಯಯನ ಮಾಡುತ್ತಿದ್ದರು. ಅವರು ಓದುತ್ತಿದ್ದ ಪುಸ್ತಕಗಳಲ್ಲಿ ಟಿಪ್ಪಣಿಗಳನ್ನು ಮಾರ್ಜಿನ್‌ಗಳಲ್ಲಿ ಬರೆಯುತ್ತಿದ್ದರು.

ಫ್ರಾನ್ಸ್ ದೇಶದಲ್ಲಿ ವೇದಾಂತದ ಸಂದೇಶವನ್ನು ಹರಡಲು ಸಿದ್ಧೇಶ್ವರಾನಂದರ, Meditation According to the Yoga Vedanta ಗ್ರಂಥವು ಪ್ರಮುಖ ಪಾತ್ರ ವಹಿಸಿತು. ಗ್ರೆಟ್ಜ್ ಕೇಂದ್ರದ ನಿವಾಸಿ ಭಕ್ತರು ವೇದಾಂತದ ಸಂದೇಶಗಳನ್ನು ಫ್ರಾನ್ಸ್‌ನಲ್ಲಿ ಹೆಚ್ಚು ಜನರಿಗೆ ತಲುಪಿಸುವ ಬಗ್ಗೆ ಹಂಬಲಪಟ್ಟರು. ಇದಕ್ಕಾಗಿ ಸ್ವಾಮಿ ಸಿದ್ಧೇಶ್ವರಾನಂದರು ೧೯೫೭ರ ಮಾರ್ಚ್‌ನಲ್ಲಿ, ತಮ್ಮ ದೇಹತ್ಯಾಗ ಮಾಡುವ ಕೆಲ ತಿಂಗಳ ಮೊದಲು ಫ್ರೆಂಚ್ ಭಾಷೆಯಲ್ಲಿ ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯ ಹೆಸರು 'ವೇದಾಂತ'. ಇದು ಇವತ್ತಿಗೂ ಪ್ರಕಾಶನಗೊಳ್ಳುತ್ತಿದೆ.

ಏಪ್ರಿಲ್ ೧೯೫೬ರಲ್ಲಿ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಮಾಧವಾನಂದರು ಹಾಗೂ ಸ್ವಾಮಿ ನಿರ್ವಾಣಾನಂದರು (ಮುಂದೆ ಸಂಘದ ಉಪಾಧ್ಯಕ್ಷರಾದರು) ಅಮೆರಿಕಾದಿಂದ ಭಾರತಕ್ಕೆ ತೆರಳುವಾಗ ಗ್ರೆಟ್ಜ್ ಕೇಂದ್ರಕ್ಕೆ ಭೇಟಿ ನೀಡಿದರು. ಈ ಸ್ವಾಮಿಗಳ ಭೇಟಿಯ ಕುರಿತಾಗಿ ಸ್ವಾಮಿ ಸಿದ್ಧೇಶ್ವರಾನಂದರು ಈ ರೀತಿ ಬರೆದರು: ''ನಾನು ಮಹಾತ್ಮರುಗಳಿರುವ ವಾತಾವರಣದಲ್ಲಿ ಉಸಿರಾಡಿದ್ದೇನೆ. ಅವರ ಬೋಧನೆಗಳೇನೂ ಅಷ್ಟು ನನ್ನನ್ನು ಆಕರ್ಷಿಸಲಿಲ್ಲ... ಆದರೆ ಅವರಲ್ಲಿ ವಿವರಿಸಲಾಗದಂತಹ ಚೈತನ್ಯವಿತ್ತು... ಅವರ ಹತ್ತಿರ ಇದ್ದರೆ ಸಾಕು ಅವರ ಆಧ್ಯಾತ್ಮಿಕ ಶಕ್ತಿ ನಮ್ಮನ್ನು ಆವರಿಸುತ್ತದೆ.''

೧೯೫೭ರ ಏಪ್ರಿಲ್ ೧ರಂದು ಸ್ವಾಮಿ ಸಿದ್ಧೇಶ್ವರಾನಂದರು ತಮ್ಮ ಹಾಸಿಗೆಯ ಬಳಿ ಬರಲು ಯಾರಿಗೂ ಅನುಮತಿ ನೀಡಲಿಲ್ಲ. ಮಾರನೆಯ ದಿನ ಬೆಳಗ್ಗೆ ಸ್ವಾಮಿಗಳಿಗೆ ಇನ್ನೊಂದು ಹೃದಯಾಘಾತವಾಯಿತು. ಈ ಬಾರಿ ಯಾವುದೇ ಚಿಕಿತ್ಸೆಯು ಫಲಿಸಲಿಲ್ಲ. ಸ್ವಾಮಿ ಸಿದ್ಧೇಶ್ವರಾನಂದರು ೨ ಏಪ್ರಿಲ್ ೧೯೫೭ ರಂದು ಫ್ರಾನ್ಸ್ ದೇಶದ ಗ್ರೆಟ್ಜ್‌ನಲ್ಲಿ ಮಹಾಸಮಾಧಿ ಹೊಂದಿದರು. ಸಿದ್ಧೇಶ್ವರಾನಂದರ ದೇಹತ್ಯಾಗದ ವಿಚಾರವಾಗಿ ಸ್ವಾಮಿ ರಂಗನಾಥಾನಂದರು, ''ಇವರ ಅಕಾಲಿಕ ಮರಣದಿಂದ, ಫ್ರಾನ್ಸ್ ದೇಶದಲ್ಲಿ ವೇದಾಂತ ಪ್ರಚಾರದ ಕಾರ್ಯಕ್ಕೆ ಹಾಗೂ ರಾಮಕೃಷ್ಣ ಮಹಾಸಂಘಕ್ಕೆ ದೊಡ್ಡ ಹೊಡೆತ ಬಿದ್ದಿದೆ ಮತ್ತು ನಾನು ಕೂಡ ವೈಯಕ್ತಿಕ ನಷ್ಟ ಅನುಭವಿಸಿದ್ದೇನೆ'' ಎಂದು ಹೇಳಿದರು.